ರಂಜ್ಯಾಲಯ

146 ನೇ ಅಧಿವೇಶನ
ನಿ-330 ರ-127

ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಶರಣಗೌಡ ಎ.ಪಾಟೀಲ್ ಬಯ್ಯಾಪುರ ಇವರು ನಿಯಮ 330 ರಡಿ ನೀಡಿರುವ ಸೂಚನಾ ಪತ್ರಕ್ಕೆ ಉತ್ತರಿಸುವ ಕುರಿತು.

*************************************************************************

**

ಪ್ರಶ್ನೆ:

ರಾಯಚೂರು-ಕೊಪ್ಪಳ ಜಿಲ್ಲೆಯಲ್ಲಿರುವ ನದಿಗಳ ಪಾತ್ರದಲ್ಲಿ 2014ನೇ ಸಾಲಿನಿಂದ ಇಲ್ಲಿಯವರೆಗೆ ಗುತ್ತಿಗೆದಾರರುಗಳಿಗೆ ವಹಿಸಿಕೊಡಲಾಗಿರುವ ಮರಳು ಬ್ಲಾಕ್‌ಗಳಿಂದ ಸರ್ಕಾರಕ್ಕೆ ಜಮೆ ಆಗಬೇಕಾಗಿರುವ ರಾಜಸ್ವವು ಸೋರಿಕೆಯಾಗಿರುವುದರ ಕುರಿತು ಸದನದಲ್ಲಿ ಪ್ರಸ್ತಾಪಿಸ ಬಯಸುತ್ತೇನೆ.

ಉತ್ತರ:

ಹೊಸ ಮರಳು ನೀತಿ, 2011 ಹಾಗೂ ಕರ್ನಾಟಕ ಉಪಖನಿಜ ರಿಯಾಯಿತಿ (ತಿದ್ದುಪಡಿ) ನಿಯಮಗಳು, 2012 ರಂತೆ ಲೋಕೋಪಯೋಗಿ ಇಲಾಖೆಯಿಂದ ಮರಳು ಗಣಿಗಾರಿಕೆ ನಿರ್ವಹಿಸಲಾಗುತ್ತಿತ್ತು. ನಂತರ, ದಿನಾಂಕ 12.08.2016 ರಂದು ಕರ್ನಾಟಕ ಉಪಖನಿಜ ರಿಯಾಯಿತಿ (ತಿದ್ದುಪಡಿ) ನಿಯಮಗಳು, 2016 ನ್ನು ಜಾರಿಗೊಳಿಸಲಾಗಿರುತ್ತದೆ. ಸದರಿ ತಿದ್ದುಪಡಿ ನಿಯಮಗಲಂತೆ ನದಿ ಪಾತ್ರಗಳಲ್ಲಿನ ಮರಳು ಬ್ಲಾಕ್ ಗಳನ್ನು ಟೆಂಡರ್-ಕಂ-ಹರಾಜು ಮೂಲಕ ಗಣಿ ಮತ್ತು ಭೂವಿಜ್ಞಾನ ಇಲಾಖೆಯಿಂದ ವಿಲೇವಾರಿ ಮಾಡಲಾಗುತ್ತಿತ್ತು.

ಪ್ರಸ್ತುತ, ಹೊಸ ಮರಳು ನೀತಿ, 2020 ಹಾಗೂ ಕರ್ನಾಟಕ ಉಪಖನಿಜ ರಿಯಾಯಿತಿ (ತಿದ್ದುಪಡಿ) ನಿಯಮಗಳು, 2021 ರಂತೆ ಸರ್ಕಾರದಿಂದ ಅಧಿಸೂಚನೆ ಮೂಲಕ ನಿಗದಿಪಡಿಸಿದ ಸರ್ಕಾರಿ ಇಲಾಖೆ / ಸಂಸ್ಥೆಗಳಿಂದ ನಿಗದಿತ ದರದಲ್ಲಿ ಸಾರ್ವಜನಿಕ ಹಾಗೂ ಸರ್ಕಾರಿ ಕಾಮಗಾರಿಗಳಿಗೆ ಮರಳು ಪೂರೈಸಲು ಅವಕಾಶ ಕಲ್ಪಿಸಲಾಗಿರುತ್ತದೆ.

2014-15ನೇ ಸಾಲಿನಿಂದ 2021-22ನೇ ಸಾಲಿನ ಫೆಬ್ರವರಿ-2022 ರ ಅಂತ್ಯಕ್ಕೆ ರಾಯಚೂರು ಮತ್ತು ಕೊಪ್ಪಳ ಜಿಲ್ಲಾ ವ್ಯಾಪ್ತಿಗಳಲ್ಲಿ ನದಿ ಪಾತ್ರದ ಮರಳು ಬ್ಲಾಕ್ ಗಳಲ್ಲಿ ಗಣಿಗಾರಿಕೆಯಿಂದ ವಿಲೇವಾರಿಯಾದ ಮರಳಿನ ಪ್ರಮಾಣ ಹಾಗೂ ಸಂಗ್ರಹಿಸಲಾದ ರಾಜಧನ ಹಾಗೂ ಇತರ ಮೊತ್ತದ ವಿವರಗಳು ಈ ಕೆಳಕಂಡಂತಿರುತ್ತವೆ.

| | | ರಾಯಚೂರು ಜಿಲ್ಲೆ | | | ಕೊಪ್ಪಳ ಜಿಲ್ಲೆ | |
|---|---|---|---|---|---|---|
| ವರ್ಷ | ಕಾರ್ಯಾದೇಶ ನೀಡಿದ / ಗುತ್ತಿಗೆ ಮಂಜೂರು ಮಾಡಿದ ಮರಳು ಬ್ಲಾಕ್ ಗಳ ಸಂಖ್ಯೆ | ವಿಲೇವಾರಿ ಮಾಡಿರುವ ಮರಳಿನ ಪ್ರಮಾಣ (ಮೆಟ್ರಿಕ್ ಟನ್ ಗಳಲ್ಲಿ) | ಸಂಗ್ರಹಿಸಲಾದ ರಾಜಧನ / ಮರಳು ಮಾರಾಟ ದರ / ಹೆಚ್ಚುವರಿ ನಿಯತಕಾಲಿಕ ಮೊತ್ತ (₹ ಲಕ್ಷಗಳಲ್ಲಿ) | ಕಾರ್ಯಾದೇಶ ನೀಡಿದ / ಗುತ್ತಿಗೆ ಮಂಜೂರು ಮಾಡಿದ ಮರಳು ಬ್ಲಾಕ್ ಗಳ ಸಂಖ್ಯೆ | ವಿಲೇವಾರಿ ಮಾಡಿರುವ ಮರಳಿನ ಪ್ರಮಾಣ (ಮೆಟ್ರಿಕ್ ಟನ್ ಗಳಲ್ಲಿ) | ಸಂಗ್ರಹಿಸಲಾದ ರಾಜಧನ / ಮರಳು ಮಾರಾಟ ದರ / ಹೆಚ್ಚುರಿ ನಿಯತಕಾಲಿಕ ಮೊತ್ತ (₹ ಲಕ್ಷಗಳಲ್ಲಿ) |
| 2014-15 | 21 | 2,13,980 | 777.29 | 25 | 2,08,961 | 445.74 |
| 2015-16 | 18 | 3,04,405 | 1240.26 | 25 | 1,37,540 | 334.92 |
| 2016-17 | 17 | 2,28,589 | 932.77 | 12 | 1,88,390 | 6289.42 |
| 2017-18 | 27 | 1,32,960 | 946.97 | 20 | 2,70,540 | 1840.15 |
| 2018-19 | 27 | 1,49,925 | 1129.86 | 8 | 83,924 | 318.00 |
| 2019-20 | 27 | 2,71,636 | 2129.38 | 8 | 6,206 | 24.87 |
| 2020-21 | 25 | 2,59,015 | 2359.87 | 8 | 11,697 | 92.61 |
| 2021-22 | 25 | 1,10,580 | 595.59 | 8 | 5,562 | 50.90 |

ಕೊಪ್ಪಳ ಹಾಗೂ ರಾಯಚೂರು ಜಿಲ್ಲಾ ವ್ಯಾಪ್ತಿಯಲ್ಲಿ ರಾಜಧನ ಸೋರಿಕೆಯಾಗುವುದನು ತಡೆಗಟ್ಟುವ ಸಂಬಂಧ ಅನಧಿಕೃತ ಮರಳು ಗಣಿಗಾರಿಕೆ, ಸಾಗಾಣಿಕೆ ಮತ್ತು ದಾಸ್ತಾನು ನಿಯಂತ್ರಿಸಲು ಜಿಲ್ಲೆ ಹಾಗು ತಾಲ್ಲೂಕು ಮರಳು ಸಮಿತಿಯಿಂದ ನಿಯಮಾನುಸಾರ ಕ್ರಮ ಕೈಗೊಳ್ಳಲಾಗುತ್ತಿದ್ದು, 2014-15ನೇ ಸಾಲಿನಿಂದ 2021-22ನೇ ಸಾಲಿನವರೆಗೆ ಅನಧಿಕೃತ ಮರಳು ಗಣಿಗಾರಿಕೆ ಚಟುವಟಿಕೆಗಳಡಿ ಸಂಗ್ರಹಿಸಲಾದ ದಂಡದ ಮೊತ್ತ ಹಾಗೂ ದಾಖಲಿಸಿದ ಮೊಕದ್ದಮೆ ವಿವರಗಳು ಈ ಕೆಳಕಂಡಂತಿರುತ್ತವೆ.

| ವರ್ಷ | ರಾಯಚೂರು ಜಿಲ್ಲೆ | | ಕೊಪ್ಪಳ ಜಿಲ್ಲೆ | |
|---|---|---|---|---|
| | ಸಂಗ್ರಹಿಸಲಾದ ದಂಡದ ಮೊತ್ತ (₹ ಲಕ್ಷಗಳಲ್ಲಿ) | ದಾಖಲಿಸಿದ ಮೊಕದ್ದಮೆಗಳ ಸಂಖ್ಯೆ | ಸಂಗ್ರಹಿಸಲಾದ ದಂಡದ ಮೊತ್ತ (₹ ಲಕ್ಷಗಳಲ್ಲಿ) | ದಾಖಲಿಸಿದ ಮೊಕದ್ದಮೆಗಳ ಸಂಖ್ಯೆ |
| 2014-15 | 127.10 | 134 | 42.38 | 8 |
| 2015-16 | 0.00 | 435 | 41.08 | 12 |
| 2016-17 | 0.00 | 359 | 381.46 | 9 |
| 2017-18 | 2.91 | 504 | 1297.55 | 35 |
| 2018-19 | 0.90 | 332 | 58.00 | 183 |
| 2019-20 | 20.11 | 160 | 0.00 | 34 |
| 2020-21 | 45.29 | 167 | 113.72 | 63 |
| 2021-22 | 42.89 | 67 | 91.03 | 64 |

ಮೇಲ್ಕಂಡಂತೆ, ರಾಯಚೂರು ಹಾಗೂ ಕೊಪ್ಪಳ ಜಿಲ್ಲಾ ವ್ಯಾಪ್ತಿಯಲ್ಲಿ ಅನಧಿಕೃತ ಮರಳು ಗಣಿಗಾರಿಕೆ ಚಟುವಟಿಕೆಗಳನು ತಡೆಗಟ್ಟಿ ರಾಜಸ್ವ ಸೋರಿಕೆಯಾಗುವುದನ್ನು ನಿಯಂತ್ರಿಸಲು ನಿಯಮಾನುಸಾರ ಜಿಲ್ಲಾ ಮರಳು ಸಮಿತಿಯಿಂದ ಕ್ರಮ ಕೈಗೊಳ್ಳಲಾಗುತ್ತಿದೆ.

ಸಂಖ್ಯೆ ಸಿಐ -ಎಂಎಂಎನ್/171/2022

Halappa B

**(ಆಚಾರ್ ಹಾಲಪ್ಪ ಬಸಪ್ಪ)**
ಗಣಿ ಮತ್ತು ಭೂವಿಜ್ಞಾನ ಹಾಗೂ
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ,
ವಿಕಲಚೇತನರ ಹಾಗೂ ಹಿರಿಯ ನಾಗರಿಕರ
ಸಬಲೀಕರಣ ಸಚಿವರು.